# ರಾಮಕೃಷ್ಣ ಮಹಾಸಂಘದ ಪರಿಹಾರ ಕಾರ್ಯಗಳು – ಜೂನ್ ೨೦೨೫
















**೧. ನೆರೆ ಪರಿಹಾರ:** ಜೂನ್ ತಿಂಗಳಲ್ಲಿ ಈಶಾನ್ಯ ರಾಜ್ಯಗಳಲ್ಲಿ ಸುರಿದ ಧಾರಾಕಾರ ಮಳೆಗೆ ಅಪಾರ ಜೀವಹಾನಿ ಹಾಗೂ ಆಸ್ತಿಪಾಸ್ತಿಗಳ ಹಾನಿ ಸಂಭವಿಸಿದೆ. ಈ ಪ್ರದೇಶಗಳಲ್ಲಿ ರಾಮಕೃಷ್ಣ ಮಿಷನ್ನಿನ ಕೇಂದ್ರಗಳು ನಡೆಸಿದ ಪರಿಹಾರ ಕಾರ್ಯಗಳು ಹೀಗಿವೆ:

**1) ಅಸ್ಸಾಂ : ಗುವಾಹಟಿ, ಸಿಲ್‌ಚಾರ್, ಶ್ರೀಭೂಮಿ** ಕೇಂದ್ರಗಳು ಹಲವು ಅಗತ್ಯ ಸಾಮಗ್ರಿಗಳನ್ನು ವಿತರಿಸಿವೆ.

**2) ಮಣಿಪುರ: ಇಂಫಾಲ್** ಕೇಂದ್ರವು 32 ಕುಟುಂಬಗಳಿಗೆ ಮೂಲಭೂತ ಸಾಮಗ್ರಿಗಳನ್ನು ವಿತರಿಸಿದೆ.

**3) ತ್ರಿಪುರ: ಧಾಲೇಶ್ವರ, ಕೈಲಾಸಶಹರ, ವಿವೇಕನಗರ** ಕೇಂದ್ರಗಳು ಹಲವೆಡೆ ಪರಿಹಾರ ಕಾರ್ಯಗಳನ್ನು ನಡೆಸಿವೆ.

**4) ಪಶ್ಚಿಮ ಬಂಗಾಳ :** ಧಾರಾಕಾರ ಮಳೆ ಹಾಗೂ ದಾಮೋದರ ಕಣಿವೆ ನಿಗಮ (DVC) ದಲ್ಲಿ ನೀರು ಬಿಡುಗಡೆ ಮಾಡಿದ್ದರಿಂದ ಪಶ್ಚಿಮ ಮೇದಿನೀಪುರ ಜಿಲ್ಲೆಯಲ್ಲಿ ನೆರೆಯುಂಟಾಗಿದೆ. **ಗರ್ಬೆಟಾ** ಕೇಂದ್ರವು ತೊಂದರೆಗೊಳಗಾದ 1000 ಕುಟುಂಬಗಳಿಗೆ ವಿವಿಧ ಆಹಾರ ಹಾಗೂ ಇತರ ಸಾಮಾಗ್ರಿಗಳನ್ನು ವಿತರಿಸಿದೆ.

**೨. ಬೇಸಿಗೆ ಪರಿಹಾರ: 1) ಆಂಧ್ರಪ್ರದೇಶ : ರಾಜಮಹೇಂದ್ರವರಂ** ಕೇಂದ್ರವು 68,000 ಲೋಟ ಮಜ್ಜಿಗೆಯನ್ನು ವಿತರಿಸಿದೆ. **2) ಒಡಿಶಾ : ಕಟಕ್** ಕೇಂದ್ರವು 1,49,300 ಲೋಟ ಮಜ್ಜಿಗೆ ಮತ್ತು ಶಕ್ತಿವರ್ಧಕ ಪಾನೀಯವನ್ನು ವಿತರಿಸಿದೆ. **3) ತಮಿಳುನಾಡು:** ಅ) **ಚೆನ್ನೈ ಮಿಷನ್:** 21,293 ಲೀ. ಮಜ್ಜಿಗೆ ವಿತರಿಸಿದೆ. ಆ) **ಸೇಲಂ** ಕೇಂದ್ರವು 3100 ಲೀ. ಮಜ್ಜಿಗೆ ವಿತರಿಸಿದೆ. **4) ಪಶ್ಚಿಮ ಬಂಗಾಳ:** ಅ) **ಕಾಮಾರಪುಕುರ** ಕೇಂದ್ರವು 2430 ಲೀ. ಮಜ್ಜಿಗೆ ವಿತರಿಸಿದೆ. ಆ) **ಸ್ವಾಮಿ ವಿವೇಕಾನಂದರ ಪೂರ್ವಿಕರ ಮನೆಯು** ವಿವಿಧ ಪಾನೀಯ, ORS ಇತ್ಯಾದಿಗಳನ್ನು ವಿತರಿಸಿದೆ.

**೩. ಸಂತ್ರಸ್ತ ಪರಿಹಾರ :** ಈ ಕೆಳಗಿನ ಕೇಂದ್ರಗಳು ಅಗತ್ಯವಿದ್ದವರಿಗೆ ವಿವಿಧ ಸಾಮಗ್ರಿಗಳನ್ನು ವಿತರಿಸಿವೆ: **ಭಾರತದಲ್ಲಿ : ಕೊಯಂಬತ್ತೂರು ಮಿಷನ್, ಗುವಾಹಟಿ, ಕಲ್ಯಾಣಿ, ಕಾಂಚೀಪುರಂ, ಕೃಷ್ಣನಗರ, ಲಿಂಬ್ಡಿ, ಮಾಲ್ಡಾ, ನಟ್ಟರಾಂಪಳ್ಳಿ, ಸೇಲಂ, ತಿರುಮಕ್ಕೂಡಲ್, ವಡೋದರ, ವಾರಣಾಸಿ ಸೇವಾಶ್ರಮ, ವಿವೇಕನಗರ. ವಿದೇಶಗಳಲ್ಲಿ:** ದಕ್ಷಿಣ ಆಫ್ರಿಕಾ : **ಡರ್ಬನ್, ಫೀನಿಕ್ಸ್** ಕೇಂದ್ರಗಳು ಜೂನ್ ತಿಂಗಳಲ್ಲಿ ವಿವಿಧ ಪ್ರದೇಶಗಳಲ್ಲಿ ಆಹಾರ ಪದಾರ್ಥ, ಸೋಪ್ ಇತ್ಯಾದಿ ಪದಾರ್ಥಗಳನ್ನು ವಿತರಿಸಿವೆ.

**೪. ಆರ್ಥಿಕ ನೆರವು, ಪುನರ್ವಸತಿ 1)ಒಡಿಶಾ: ಪುರಿ ಮಠವು** ೧೬ ಹೊಲಿಗೆ ಯಂತ್ರಗಳನ್ನು ವಿತರಿಸಿದೆ. **2) ಪಶ್ಚಿಮ ಬಂಗಾಳ : ಸ್ವಾಮಿ ವಿವೇಕಾನಂದರ ಪೂರ್ವಿಕರ ಮನೆಯು** 2 ಹೊಲಿಗೆ ಯಂತ್ರಗಳನ್ನು ವಿತರಿಸಿದೆ.

**೫. ಸಂತ್ರಸ್ತ ಪುನರ್ವಸತಿ: ಬಾಂಗ್ಲಾದೇಶ : ಬಾಗೇರ್‌ಹಾಟ್** ಕೇಂದ್ರವು 30 ಟಿನ್ ಶೀಟ್‌ಗಳನ್ನು ಬಡ ಕುಟುಂಬಗಳಿಗೆ ಮನೆ ನಿರ್ಮಾಣಕ್ಕಾಗಿ ವಿತರಿಸಿದೆ.

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020